# ಅಮೆರಿಕದಲ್ಲಿ ಸ್ವಾಮಿ ವಿವೇಕಾನಂದರು

ಆಂಗ್ಲ ಮೂಲ : **ಮೇರಿ ಲೂಯಿ ಬರ್ಕ್**

ಸಂಗ್ರಹಾನುವಾದ : **ಸ್ವಾಮಿ ವೀರೇಶಾನಂದ**

## ಭಾಗ ೧೪

### ಚಿಕಾಗೋ ನಗರದ ಸುತ್ತಮುತ್ತ *(ಮುಂದುವರಿದ ಭಾಗ)*

ಸ್ವಾಮಿ ವಿವೇಕಾನಂದರು ಸರ್ವಧರ್ಮ ಸಮ್ಮೇಳನದ ನಂತರ, ಸ್ವಲ್ಪಕಾಲ ಚಿಕಾಗೋ ನಗರದಲ್ಲಿಯೇ ನೆಲೆಸಿದರು. ಅವರು ಆ ಕಾಲದಲ್ಲಿ, ಬಿಡುವಿರದ ಕಾರ್ಯಕ್ರಮಗಳ ನಡುವೆಯೂ ತಮ್ಮ ಅತೀಂದ್ರಿಯ ನೆಲೆಯ ಭಾವವನ್ನು ಕಾಪಾಡಿಕೊಂಡಿದ್ದರು. ಅವರ ಮನಸ್ಸು , ತಮ್ಮ ಗುರುಗಳಾದ ಶ್ರೀರಾಮಕೃಷ್ಣರ ರೀತಿಯಲ್ಲಿಯೇ, ಆಧ್ಯಾತ್ಮಿಕ ಜಗತ್ತಿನ ಉನ್ನತ ಸ್ಥಿತಿಗಳಿಗೆ ಏರುತ್ತಿತ್ತು. ಆದರೂ ಅಮೆರಿಕೆಯ ತಮ್ಮ ಕಾರ್ಯದ ನಿಮಿತ್ತವಾಗಿ ಅವರು ಸಾಧಾರಣ ನೆಲೆಗೆ ತಮ್ಮ ಮನಸ್ಸನ್ನು ಎಳೆದು ತರುತ್ತಿದ್ದರು. ಸ್ವಾಮೀಜಿಯವರ ಆಧ್ಯಾತ್ಮಿಕ ಭಾವವು ಸಹಜವಾದುದು. ತಾವು ಅಮೆರಿಕೆಯಲ್ಲಿ ಕಳೆದ ಮೊದಲ ದಿನಗಳಲ್ಲಿ ಇದರಿಂದ ಅವರು ಸ್ವಲ್ಪಮಟ್ಟಿಗೆ ಕಷ್ಟವನ್ನು ಕೂಡ ಅನುಭವಿಸಬೇಕಾಯಿತು. ಈ ವಿಷಯದಲ್ಲಿ ಭಗಿನಿ ನಿವೇದಿತಾ ಹೀಗೆ ಬರೆಯುತ್ತಾರೆ:

‘‘ನಾವು ನೆನಪಿನಲ್ಲಿ ಇಡಬೇಕು. ಸ್ವಾಮಿ ವಿವೇಕಾನಂದರು ದೊಡ್ಡ ತಪಸ್ಸೆಯನ್ನೇನೂ ಮಾಡುತ್ತಿರುವಂತೆ ನಮಗೆ ತೋರಿ ಬರುತ್ತಿರಲಿಲ್ಲ. ಆದರೆ ಅವರ ಇಡೀ ಜೀವನದಲ್ಲಿ ನಮಗೆ ಕಂಡು ಬರುವುದು ಉತ್ಕಟವಾದ ಏಕಾಗ್ರತಾಶಕ್ತಿ. ಬೇರೆಯವರಿಗೆ ಇದೊಂದು ಭಯಂಕರವಾದ ತಪಸ್ಸೆಯೇ ಸರಿ. ಅವರು ಮೊದಲು ಅಮೆರಿಕೆಗೆ ಹೋದಾಗ, ತಮ್ಮನ್ನು ಧ್ಯಾನಮಗ್ನರಾಗಿ ಸುವ ಈ ತೀವ್ರಭಾವವನ್ನು ಅದುಮಿಟ್ಟುಕೊಳ್ಳಲು ಅವರಿಗೆ ಸಾಧ್ಯವಾಗುತ್ತಿರಲಿಲ್ಲ. ಅವರಿಗೆ ಭಾರತದಲ್ಲಿ ಸತ್ಕಾರವನ್ನು ಮಾಡಿದ್ದ ಒಬ್ಬ ಆತಿಥೇಯರು ಹೀಗೆ ಹೇಳುತ್ತಾರೆ: ‘ಅವರು ಧ್ಯಾನಕ್ಕೆ ಕುಳಿತರೆಂದರೆ, ಎರಡು ನಿಮಿಷಗಳಲ್ಲಿ ಅವರಿಗೆ ಹೊರಗಿನ ಯಾವ ಸಂವೇದನೆಯೂ ಗೊತ್ತಾಗುತ್ತಿರಲಿಲ್ಲ. ಆ ಸಮಯದಲ್ಲಿ ಕೆಲವೊಮ್ಮೆ ಅವರ ದೇಹವು ಸೊಳ್ಳೆಗಳಿಂದ ಆವೃತವಾಗಿ ಕಪ್ಪಗೆ ಕಾಣುತ್ತಿತ್ತು.’ ಸ್ವಾಮೀಜಿಯವರಿಗೆ ಈ ಬಗೆಯ ಧ್ಯಾನಾಭ್ಯಾಸವು ಸ್ವಭಾವಸಿದ್ಧವಾಗಿ ಹೋಗಿತ್ತು. ಈ ಬಗೆಯ ಭಾವದಲ್ಲಿ ಅವರು ಅಮೆರಿಕೆಗೆ ಬಂದಿಳಿದರು. ಅಮೆರಿಕೆಯು ರೈಲ್ವೇ ಮಾರ್ಗಗಳು, ಟ್ರಾಮ್ ದಾರಿಗಳಿಂದ ತುಂಬಿದ ದೇಶವಾಗಿತ್ತು. ಹಾಗೆಯೇ ಸ್ವಾಮೀಜಿಯವರಿಗೆ ಸಂಕೀರ್ಣವಾದ ಕಾರ್ಯಕ್ರಮಗಳಿದ್ದವು. ಹೀಗಾಗಿ ಅವರು ಒಂದೆರಡು ಬಾರಿ ಟ್ರಾಮ್‌ನಲ್ಲಿ ಪಯಣಿಸುತ್ತಿರುವಾಗ, ಧ್ಯಾನಮಗ್ನರಾಗಿದ್ದ ಅಸಹಜವೇನೂ ಅಲ್ಲ. ಆ ಟ್ರಾಮಿನ ಕಂಡಕ್ಟರ್ ಆ ಸಮಯಗಳಲ್ಲಿ ಟಿಕೆಟ್ಟಿನ ಹಣವನ್ನು ಕೇಳಲು ಅವರನ್ನು ಎಚ್ಚರಿಸಿದ್ದೂ ಉಂಟು. ಆ ಎಲ್ಲ ಸಂದರ್ಭಗಳಲ್ಲಿ ಸ್ವಾಮೀಜಿಯವರು ಬಹಳ ಇರುಸುಮುರುಸಿಗೆ ಒಳಗಾಗುತ್ತಿದ್ದರು. ತಮ್ಮ ದಿವ್ಯಭಾವವನ್ನು ಹತ್ತಿಕ್ಕಲು ಬಹಳ ಪ್ರಯತ್ನ ಮಾಡುತ್ತಿದ್ದರು.’’

ಸರ್ವಧರ್ಮ ಸಮ್ಮೇಳನದ ನಂತರ ಸ್ವಾಮೀಜಿ ಚಿಕಾಗೋ ನಗರದ ಹಲವಾರು ಗಣ್ಯವ್ಯಕ್ತಿಗಳ ಮನೆಯಲ್ಲಿ ಅತಿಥಿಯಾಗಿದ್ದರು. ಈ ಕಾಲಮಾನದ ಬಗ್ಗೆ ಅವರೇ ಹೇಳಿಕೊಳ್ಳುತ್ತಾರೆ: ‘‘ನಗರದ ಹಲವು ಸುಂದರ ಸೌಧಗಳು ನನ್ನ ಸ್ವಾಗತಕ್ಕಾಗಿ ತೆರೆದಿದ್ದವು. ಆ ಸಮಯದಲ್ಲಿ ನಾನು ಯಾರದಾದರೂ ಒಬ್ಬರ ಮನೆಯಲ್ಲಿ ಅತಿಥಿಯಾಗಿ ಇರುತ್ತಿದ್ದೆ.’’ ನಾವು ನೋಡುವಂತೆ ಒಬ್ಬರ ಮನೆಯಂತೂ ಯಾವತ್ತೂ ಸ್ವಾಮಿ ವಿವೇಕಾನಂದರಿಗೆ ಮುಕ್ತವಾಗಿ ತೆರೆದೇ ಇತ್ತು ಎನ್ನಬಹುದು. ಆ ಮನೆಯಲ್ಲಿ ಅವರು ಸರ್ವಧರ್ಮ ಸಮ್ಮೇಳನದ ಸಮಯದಲ್ಲಿ ಮತ್ತು ಮುಂದೂ ಕೂಡ ವಾಸ್ತವ್ಯ ಹೂಡಿದ್ದರು. ಅದೇ ಶ್ರೀಮತಿ ಮತ್ತು ಶ್ರೀ ಜಾನ್ ಬಿ. ಲಿಯಾನ್ ಅವರ ಮನೆ. ಇದಲ್ಲದೆ ಸ್ವಲ್ಪ ಕಾಲ ಅವರು ಹೇಲ್ ಕುಟುಂಬದ ಅತಿಥಿಯೂ ಆಗಿದ್ದರು. ಈ ಕುಟುಂಬದ ಜನರು ಸ್ವಾಮೀಜಿಯವರಿಗೆ ಬಹಳ ಪ್ರೀತಿಪೂರ್ವಕವಾಗಿ ಆತಿಥ್ಯವನ್ನು ಮಾಡುತ್ತಿದ್ದರು; ತಮ್ಮ ಕುಟುಂಬದ ಸದಸ್ಯನೆಂದೇ ಸ್ವಾಮೀಜಿಯವರನ್ನು ಭಾವಿಸಿದ್ದರು. ಸ್ವಾಮೀಜಿಯವರ ಮನೋಭಾವವನ್ನು ಚೆನ್ನಾಗಿ ಅರ್ಥಮಾಡಿಕೊಂಡಿದ್ದರು. ಹಾಗೆಂದೇ ಅವರನ್ನು ಹೃದಯಪೂರ್ವಕವಾಗಿ ಪ್ರೀತಿಸುತ್ತಿದ್ದರು.

ಹೇಲ್ ಕುಟುಂಬದವರ ಮನೆ ಇದ್ದದ್ದು ಲಿಂಕನ್ ಪಾರ್ಕ್ ಎನ್ನುವ ಚಿಕಾಗೋದ ಸುಪ್ರಸಿದ್ಧ ಉದ್ಯಾನವನದ ಹತ್ತಿರದಲ್ಲಿ. ಸ್ವಾಮೀಜಿ ಅಲ್ಲಿಗೆ ಅಡ್ಡಾಡಲು ಹೋಗುತ್ತಿದ್ದರು. ಸೂರ್ಯರಶ್ಮಿಯನ್ನು ಅಲ್ಲಿ ಆನಂದಿಸುತ್ತಿದ್ದರು. ಈ ವಿಹಾರದ ಸಮಯದಲ್ಲಿ ಒಂದು ಪ್ರಮುಖವಾದ ಘಟನೆ ನಡೆಯಿತು. ಒಬ್ಬ ಯುವ ತಾಯಿ ಮತ್ತು ಆಕೆಯ ಆರು ವರ್ಷ ವಯಸ್ಸಿನ ಮಗಳು ಸ್ವಾಮೀಜಿ ಕುಳಿತಿರುತ್ತಿದ್ದ ಮಾರ್ಗದಲ್ಲಿಯೇ ಮಾರುಕಟ್ಟೆಗೆ ಹಾದು ಹೋಗುತ್ತಿದ್ದರು. ಈ ಹಿಂದೂ ಯುವಕನು ತನ್ನ ಮಗುವನ್ನು ನೋಡಿಕೊಳ್ಳಲು ವಿಶ್ವಾಸಾರ್ಹನು ಎಂದು ಆಕೆಯು ಪರಿಗಣಿಸಿದಳು ಎಂದು ಕಾಣುತ್ತದೆ. ಒಮ್ಮೆ ತಾನು ಮಾರುಕಟ್ಟೆಗೆ ಹೋದಾಗ ಮಗುವನ್ನು ಸ್ವಾಮೀಜಿಯ ಬಳಿ ಬಿಟ್ಟುಹೋದಳು. ಅಂದಿನಿಂದ ಪ್ರತಿದಿನವೂ ಅವರು ಪಾರ್ಕಿನಲ್ಲಿ ಭೇಟಿಯಾದಾಗ, ಮಗುವನ್ನು ಸ್ವಾಮೀಜಿಯವರ ಸುಪರ್ದಿಯಲ್ಲಿ ಬಿಟ್ಟು ಹೋಗು

ತ್ತಿದ್ದಳು. ಈ ಕಥೆ ಇಲ್ಲಿಗೇ ಕೊನೆಗೊಳ್ಳಲಿಲ್ಲ. ಹುಡುಗಿಯು ಹದಿನಾರು ವರ್ಷದಳಾದಳು. ಆಗ ಆಕೆಯ ತಾಯಿಗೆ ಸ್ವಾಮಿ ವಿವೇಕಾನಂದರ ಚಿತ್ರವೊಂದು ಸಿಕ್ಕಿತು. ಇದನ್ನು ಮಗಳಿಗೆ ತಾಯಿ ತೋರಿಸಿದಳು. 'ನಿನ್ನ ಈ ಸ್ನೇಹಿತನನ್ನು ಗುರುತು ಹಿಡಿಯ ಬಲ್ಲೆಯಾ?' ಎಂದು ಕೇಳಿದಳು. ಆಶ್ಚರ್ಯವೋ ಎಂಬಂತೆ ಮಗಳು ಸ್ವಾಮಿ ವಿವೇಕಾನಂದರ ನೆನಪು ಮಾಡಿಕೊಂಡಳು. ಆಕೆ ಮದುವೆಯಾಗಿ ಫಿಲಡೆಲ್ಫಿಯಾ ನಗರಕ್ಕೆ ಹೋದಳು. ಸ್ವಾಮೀಜಿಯವರ ಪುಣ್ಯಸ್ಮೃತಿಯು ಮುಂದೆ ಅವಳನ್ನು ಆಧ್ಯಾತ್ಮಿಕ ಜೀವನಕ್ಕೆ ಕರೆತಂದಿತು. ಅವಳು ಆ ನಗರಕ್ಕೆ ಭೇಟಿಕೊಡುತ್ತಿದ್ದ ಸ್ವಾಮಿ ಅಖಿಲಾನಂದರ ಶಿಷ್ಯೆಯಾದಳು. ಅವರ ಮಾರ್ಗದರ್ಶನದಲ್ಲಿ ಆಧ್ಯಾತ್ಮಿಕ ಜೀವನವನ್ನು ನಡೆಸಿದಳು. ಹೀಗೆ ಸ್ವಾಮೀಜಿಯವರ ಸಂಪರ್ಕಕ್ಕೆ ಬಂದ ಸಣ್ಣ ಘಟನೆಯೂ ಎಷ್ಟೋ ಜನರಿಗೆ ಅವರ ಜೀವನದಲ್ಲಿ ಬೃಹತ್ತಾದ ಪರಿವರ್ತನೆಯನ್ನೇ ಉಂಟುಮಾಡಿತು. ಅವರ ಒಂದು ನೋಟ, ಸ್ಪರ್ಶ ಅವರ ಬಾಳನ್ನೇ ಬೆಳಗುತ್ತಿತ್ತು.

ಅಮೆರಿಕೆಯ ಎಲ್ಲ ಕುಟುಂಬಗಳಲ್ಲಿ ಹೇಲ್ ಕುಟುಂಬವು ಬಹಳ ಭಾಗ್ಯಶಾಲಿಯೆಂದೇ ಹೇಳಬೇಕು. ಸ್ವಾಮೀಜಿಯವರು ಆಗಿಂದಾಗ್ಯೆ ಅವರ ಅತಿಥಿಯಾಗಿ ಇರುತ್ತಿದ್ದರು. ೧೮೯೪ರ ವರ್ಷವೆಲ್ಲ ಆ ಕುಟುಂಬದವರ ಮನೆಯನ್ನೇ ತಮ್ಮ ಕೇಂದ್ರವನ್ನಾಗಿ ಮಾಡಿಕೊಂಡಿದ್ದರು. ಇದೇ ಸಮಯದಲ್ಲಿ ಸ್ವಾಮೀಜಿ, ವೈಚಾರಿಕತೆ, ಶ್ರದ್ಧೆ ಮತ್ತು ಪ್ರೀತಿ ಮುಂತಾದ ವಿಷಯಗಳ ಬಗ್ಗೆ ಟಿಪ್ಪಣಿಗಳನ್ನು ಮಾಡಿಕೊಂಡರು. ಇದರ ತಾರೀಖು ನಮಗೆ ಖಚಿತವಾಗಿ ತಿಳಿದುಬಂದಿಲ್ಲ. ಸ್ವಾಮೀಜಿ ಇವುಗಳನ್ನು ಹೇಲ್ ಕುಟುಂಬದವರು ನೀಡಿದ ಬರೆಯುವ ಕಾಗದದಲ್ಲಿ ಗುರುತು ಹಾಕಿಕೊಂಡರು ಎನ್ನುವುದಂತೂ ಸತ್ಯ.

ಸ್ವಾಮಿ ವಿವೇಕಾನಂದರು ಚಿಕಾಗೋ ನಗರದಲ್ಲಿ ಇರುವಾಗ ಇವರ ಅದ್ಭುತ ಆಧ್ಯಾತ್ಮಿಕ ಶಕ್ತಿಯ ಬಗ್ಗೆ ಬಾಯಿಮಾತಿನಿಂದಲೇ ಪ್ರಚಾರವಾಯಿತು. ಹೀಗಾಗಿ ಅವರನ್ನು ದರ್ಶಿಸಲೆಂದು ಹಲವಾರು ರೀತಿಯ ಜನರು ಬರುತ್ತಿದ್ದರು. ವೈಯಕ್ತಿಕ ಸಂದರ್ಶನಗಳು ನಡೆಯುತ್ತಿದ್ದವು. ಜನರು ಅವರಿಂದ ಆಧ್ಯಾತ್ಮಿಕ ಸಾಂತ್ವನವನ್ನು ಪಡೆಯುತ್ತಿದ್ದರು. ತಮ್ಮ ಅನೇಕ ವೈಯಕ್ತಿಕ ಸಮಸ್ಯೆಗಳಿಗೆ ಪರಿಹಾರವನ್ನು ಪಡೆದುಕೊಳ್ಳುತ್ತಿದ್ದರು. ಅವರ ಆಶ್ರಯವನ್ನು ಪಡೆದವರಿಗೆ ಸ್ವಾಮಿ ವಿವೇಕಾನಂದರು ಒಬ್ಬ ತಂದೆ, ಮಗ, ಗುರು, ಸ್ನೇಹಿತ — ಎಲ್ಲವೂ ಆಗಿದ್ದರು.

ಕೆಲವೊಂದು ವಾಸ್ತವ ಸಂಗತಿಗಳಿಂದ ಸ್ವಾಮೀಜಿಯವರ ಮನಸ್ಸು ಎಂಥ ಉನ್ನತ ಭಾವದಲ್ಲಿ ಇತ್ತು ಎನ್ನುವುದನ್ನು ನಾವು ಊಹಿಸಿಕೊಳ್ಳಬಹುದು. ಸಾಧಾರಣ ಸ್ಥಿತಿಯಲ್ಲಿ ಇದ್ದಾಗ ಅವರ ಮನಸ್ಸು ಅತ್ಯಂತ ಕ್ರಿಯಾಶೀಲವಾಗಿತ್ತು. ಅವರು ಪಾಶ್ಚಾತ್ಯ ನಾಗರಿಕತೆ ಮತ್ತು ಸಂಸ್ಥೆಗಳ ಬಗ್ಗೆ ತೀವ್ರವಾದ ಆಸಕ್ತಿಯನ್ನು ತೋರಿಸುತ್ತಿದ್ದರು. ಅವುಗಳ ಬಗ್ಗೆ ಮಾಹಿತಿಯನ್ನು ಕಲೆಹಾಕುತ್ತಿದ್ದರು; ಆಳವಾದ ಅಧ್ಯಯನವನ್ನು ಮಾಡುತ್ತಿದ್ದರು. ಹಲವಾರು ಕಾರ್ಯಕ್ರಮಗಳಲ್ಲಿ ಮತ್ತು ಕೂಟಗಳಲ್ಲಿ ಭಾಗವಹಿಸಿದ್ದರು. ತುಂಬು ತಾರುಣ್ಯದಲ್ಲಿ ಇದ್ದ ಸ್ವಾಮೀಜಿಯವರ ವದನ ದಿವ್ಯ ಪ್ರಭೆಯಿಂದ ಬೆಳಗುತ್ತಿತ್ತು. ಇಷ್ಟಾದರೂ ಅವರ ಮನಸ್ಸಿನ ಬಹುಭಾಗವು ಶಾಂತವಾಗಿತ್ತು; ಸುಪ್ತವಾಗಿದ್ದು ಹೊರಗಿನ ಯಾವುದೇ ಸಂಗತಿಗಳಿಂದ ನಿರ್ಲಿಪ್ತವಾಗಿತ್ತು; ಭಗವದ್ಧ್ಯಾನ ದಲ್ಲಿ ಸತತವೂ ವಿಲೀನವಾಗಿ ಹೋಗಿತ್ತು; ತಮ್ಮೆಡೆಗೆ ಬಂದವರಿಗೆಲ್ಲ ಪೂರ್ಣ ಆಶೀರ್ವಾದಗಳನ್ನು ನೀಡಲು ಯಾವತ್ತೂ ನಿರತವಾಗಿತ್ತು. ಅದೆಷ್ಟು ಸಲ ಅವರು ನಿರ್ವಿಕಲ್ಪ ಸಮಾಧಿಯನ್ನು ಏರಿದ್ದರೋ, ಶ್ರೀರಾಮಕೃಷ್ಣರ ಕೃಪಾಶೀರ್ವಾದದಿಂದ ಮರಳಿಬಂದಿದ್ದರೋ, ನಮಗೆ ತಿಳಿಯದು. ಹೀಗೆಂದೇ ಅವರಿಗೆ ತಮ್ಮ ಯುಗಪ್ರವರ್ತಕ ಕಾರ್ಯವನ್ನು ಮಾಡಲು ಸಾಧ್ಯವಾಯಿತು.

ಇದೇ ಸಮಯದಲ್ಲಿ ಲೆಕ್ಚರ್ ಬ್ಯೂರೋ (ಪ್ರವಚನ ಕಾರ್ಯಗಳನ್ನು ಆಯೋಜಿಸುವ ಒಂದು ಸಂಸ್ಥೆ) ಒಂದರ ಜೊತೆಗೆ ಸ್ವಾಮಿ ವಿವೇಕಾನಂದರು ಒಪ್ಪಂದ ಮಾಡಿಕೊಂಡರು. ಇದರ ಖಚಿತ ದಿನಾಂಕ ನಮಗೆ ತಿಳಿದುಬಂದಿಲ್ಲ. ಚಳಿಗಾಲದ ಆರಂಭದಲ್ಲಿ ಪ್ರವಚನಗಳ ಕಾರ್ಯಕ್ರಮಗಳನ್ನು ಹಮ್ಮಿಕೊಂಡು ಬಿರುಗಾಳಿಯಂತೆ ಸುತ್ತಲು ಆರಂಭಿಸಿದೆನೆಂದು ಅವರು ತಮ್ಮ ಒಂದು ಪತ್ರದಲ್ಲಿ ಹೇಳಿಕೊಳ್ಳುತ್ತಾರೆ; ನ್ಯೂಯಾರ್ಕ್ ಮತ್ತು ಬೋಸ್ಟನ್ ಪಟ್ಟಣಗಳ ಮಧ್ಯೆ ಸಂಚರಿಸಲು ಆರಂಭಿಸಿದ್ದಾಗಿ ತಿಳಿಸುತ್ತಾರೆ. ಸ್ವಾಮೀಜಿ ಲೆಕ್ಚರ್ ಬ್ಯೂರೋ ಸಹಾಯವನ್ನು ಏಕೆ ಪಡೆದುಕೊಂಡರು ಎನ್ನುವ ಪ್ರಶ್ನೆ ಏಳುತ್ತದೆ. ಆ ಕಾಲದಲ್ಲಿ ಭಾಷಣಕಾರರು ಈ ರೀತಿಯ ಸಂಸ್ಥೆಗಳ ಸಹಾಯವನ್ನು ಪಡೆದುಕೊಳ್ಳುತ್ತಿದ್ದರು. ಇಲ್ಲದಿದ್ದರೆ ವ್ಯವಸ್ಥಿತವಾಗಿ ವಿವಿಧ ನಗರಗಳಲ್ಲಿ ಪ್ರವಚನ ಕಾರ್ಯಕ್ರಮಗಳನ್ನು ಏರ್ಪಡಿಸುವುದು ಬಹಳ ಕಷ್ಟದ ಕೆಲಸವಾಗಿತ್ತು. ಸ್ವಾಮೀಜಿ ತಮ್ಮ ಭಾರತೀಯ ಕಾರ್ಯಕ್ಕಾಗಿ ಹಣ ಸಂಗ್ರಹಿಸುವ ಉದ್ದೇಶವನ್ನು ಆಗ ಹೊಂದಿದ್ದರು. ಹೀಗಾಗಿ ಲೆಕ್ಚರ್ ಬ್ಯೂರೋ ಒಂದರ ಸಹಾಯವನ್ನು ಪಡೆಯುವುದು ಅವರಿಗೆ ಅತ್ಯಾವಶ್ಯಕವಾಗಿತ್ತು.

ಈ ಲೆಕ್ಚರ್ ಬ್ಯೂರೋವಿನ ಮುಖ್ಯಸ್ಥ ಸ್ಲೇಟನ್ ಎನ್ನುವವನು. ಅವನ ಕುತಂತ್ರಕ್ಕೆ ಸ್ವಾಮೀಜಿ ಬಲಿಪಶುವಾಗಿಬಿಟ್ಟರು. ಸ್ವಾಮೀಜಿಯವರನ್ನು ಹಣಸಂಪಾದನೆಗೆ ಸಮರ್ಥವಾಗಿ ಬಳಸಿಕೊಳ್ಳಬಹುದು ಎಂದು ಅವನಿಗೆ ಮೊದಮೊದಲೇ ಗೊತ್ತಾಯಿತು. ಇದನ್ನು ಸ್ವಾಮೀಜಿಯವರ ಬಗ್ಗೆ ಚಿಕಾಗೋ ಪತ್ರಿಕೆಗಳಲ್ಲಿ ಬಂದ ಪ್ರಶಂಸೆಯ ಮಾತುಗಳನ್ನು ಓದಿ ಅವನು ತಿಳಿದುಕೊಂಡ. ಇದಲ್ಲದೆ, ಡಾ. ಡಬ್ಲ್ಯು. ಹೆಚ್ ಥಾಮಸ್ ಎನ್ನುವ ಕ್ರೈಸ್ತ ಉಪದೇಶಕ ರೊಬ್ಬರು ಸ್ವಾಮೀಜಿಯವರ ಬಗ್ಗೆ ಉದಾರ ಮನಸ್ಸಿನಿಂದ ಒಂದು ಪ್ರಶಂಸಾಪತ್ರವನ್ನು ಕೂಡ ಬರೆದುಕೊಟ್ಟರು. ಅದನ್ನು ಸ್ವಾಮೀಜಿಯವರ ಪ್ರವಚನಗಳ ಜಾಹೀರಾತಿಗೆ ಸ್ಲೇಟನ್ ಚೆನ್ನಾಗಿ ಉಪಯೋಗಿಸಿಕೊಂಡ. ಅದರಲ್ಲಿ ಹೀಗೆ ಬರೆದಿತ್ತು:

''ಪ್ರಿಯ ಸ್ಲೇಟನ್ ಅವರೇ, ಪೌರಸ್ತ್ಯ ದೇಶಗಳಿಂದ ಬಂದು ಮಹಾನ್ ಸರ್ವಧರ್ಮ ಸಮ್ಮೇಳನದಲ್ಲಿ ಪಾಲ್ಗೊಂಡ ವಿದ್ವಾಂಸರಲ್ಲಿ ಸ್ವಾಮಿ ವಿವೇಕಾನಂದರು ಅತ್ಯಂತ ಪ್ರಸಿದ್ಧರು; ಜನ ಮೆಚ್ಚಿದಂತಹವರು. ಅವರು ಭಾಷಣ ಮಾಡುವ ಸಂದರ್ಭದಲ್ಲೆಲ್ಲ ಸಾವಿರಾರು ಜನರು ಸ್ಥಳಾಭಾವದಿಂದ ನಿರಾಶರಾಗಿ ಹೋಗಬೇಕಾದ ಪ್ರಸಂಗ ಒದಗಿಬರುತ್ತಿತ್ತು. ಅವರೆಡೆಗೆ ಜನರು ಆಕರ್ಷಿತರಾಗುತ್ತಿದುದು ಕೇವಲ ಕುತೂಹಲದಿಂದ ಅಲ್ಲ. ಅವರ ಭಾಷಣವನ್ನು ಒಮ್ಮೆ ಕೇಳಿದವರನ್ನು ವಿವೇಕಾನಂದರು ತಮ್ಮ ಅಪೂರ್ವ ಸಾನ್ನಿಧ್ಯದ ಅಯಸ್ಕಾಂತ ಶಕ್ತಿಯಿಂದ, ಅವರ ವಾಗ್ಝರಿಯ ಓಜಸ್ಸು ಮತ್ತು ಶಕ್ತಿಗಳಿಂದ, ಇಂಗ್ಲಿಷ್ ಭಾಷೆಯ ಮೇಲೆ ಅವರ ಮೇಲೆ ಇದ್ದ ಪ್ರಭುತ್ವದಿಂದ ಮತ್ತು ಅವರು ಭಾಷಣ ಮಾಡುವ ವಿಷಯದಲ್ಲಿನ ಉತ್ಕಟ ಆಸಕ್ತಿಗಳಿಂದ ಪ್ರಭಾವಿತರನ್ನಾಗಿ ಮಾಡುತ್ತಾರೆ. ಹಾಗೂ ಅವರೆಲ್ಲ ಅವರ ಭಾಷಣವನ್ನು ಮತ್ತೆ ಮತ್ತೆ ಕೇಳಲು ಉತ್ಸುಕರಾಗುತ್ತಾರೆ. ನಮ್ಮ ದೇಶದ ಹತ್ತುಹಲವು ನಗರಗಳ ಜನತೆಗೆ ಈ ಉದಾತ್ತ, ನಿಸ್ಪೃಹ ಮತ್ತು ಪ್ರೇಮಮಯಿ ಸಂನ್ಯಾಸಿಯನ್ನು ನೋಡುವ ಮತ್ತು ಅವರ ವಾಣಿಯನ್ನು ಆಲಿಸುವ ಜೀವಮಾನಕಾಲದ ಅವಕಾಶ ಈದೀಗ ಪ್ರಾಪ್ತವಾಗಿದೆ. ಅವರು ತಮ್ಮ ಸಂನ್ಯಾಸಿ ಸಂಪ್ರದಾಯದ ಉಡುಪನ್ನು ಧರಿಸುತ್ತಾರೆ. ಹಾಗೂ ಬಹು ದೂರದಲ್ಲಿರುವ ತಮ್ಮ ದೇಶದ ಧರ್ಮಗಳು ಮತ್ತು ಪದ್ಧತಿಗಳ ಬಗ್ಗೆ ನೈಜ ಚಿತ್ರಣದ ಕಥೆಯನ್ನು ಹೇಳುತ್ತಾರೆ.'' — ಡಬ್ಲ್ಯು. ಹೆಚ್. ಥಾಮಸ್.

ಲೆಕ್ಚರ್ ಬ್ಯೂರೋ ಮುಖ್ಯಸ್ಥನಾದ ಸ್ಲೇಟನ್ ಮೂರು ವರ್ಷಗಳ ಒಪ್ಪಂದ ಪತ್ರಕ್ಕೆ ಸಹಿ ಹಾಕುವಂತೆ ಸ್ವಾಮೀಜಿಯವರನ್ನು ಒತ್ತಾಯಿಸಿದನು. ಇದನ್ನು ಈಗ ಅರ್ಥಮಾಡಿಕೊಳ್ಳುವುದು ಕಷ್ಟ. ಸ್ವಾಮೀಜಿ ತಮ್ಮ ಭವಿಷ್ಯದ ಕಾರ್ಯದ ವಿಷಯದಲ್ಲಿ ಯಾವ ನಿರ್ಧಾರಕ್ಕೂ ಆಗ ಬಂದಿರಲಿಲ್ಲ. ಮೂರು ವರ್ಷಗಳ ಕಾಲ ಅಮೆರಿಕೆಯಲ್ಲಿ ಕಳೆಯುವ ಯೋಚನೆಯೂ ಅವರಿಗೆ ಇರಲಿಲ್ಲ. ಆದರೂ ವಿಶ್ವಾಸಾರ್ಹವಲ್ಲದ ಈ ಒಪ್ಪಂದ ಪತ್ರಕ್ಕೆ ಸ್ವಾಮೀಜಿ, ತಮ್ಮ ಸ್ನೇಹಿತರ ಶಿಫಾರಸಿನ ಮೇಲೆ, ಸಹಿಯನ್ನು ಹಾಕಿಯೇಬಿಟ್ಟರು. ಅವರ ಸ್ನೇಹಿತರು ಆರ್ಥಿಕ ವ್ಯವಹಾರದಲ್ಲಿ ಮುಗ್ಧ ರಾಗಿದ್ದರೆಂದೇ ಹೇಳಬೇಕು. ಮುಂದೆ ಈ ಲೆಕ್ಚರ್ ಬ್ಯೂರೋ ಸ್ವಾಮೀಜಿಯವರಿಗೆ ಮಹಾ ಮೋಸವನ್ನು ಮಾಡುವುದನ್ನು ನೋಡುತ್ತೇವೆ.

ಸ್ವಾಮೀಜಿಯವರು ಎಂದು ಈ ಲೆಕ್ಚರ್ ಬ್ಯೂರೋವಿನ ಸಹಭಾಗಿತ್ವದಲ್ಲಿ ಪ್ರವಚನಗಳನ್ನು ನೀಡಲು ಆರಂಭಿಸಿದರು ಎನ್ನುವುದು ತಿಳಿದುಬಂದಿಲ್ಲ. ಹಾಗೂ ಎಲ್ಲೆಲ್ಲಿ ಅವರು ಹೋಗಿದ್ದರು, ಎಷ್ಟು ಭಾಷಣಗಳನ್ನು ಮಾಡಿದರು ಎನ್ನುವುದಕ್ಕೆ ಸರಿಯಾದ ದಾಖಲೆಗಳು ನಮಗೆ ಲಭ್ಯವಿಲ್ಲ. ಇದನ್ನೆಲ್ಲ ಲೆಕ್ಚರ್ ಬ್ಯೂರೋವಿನವರು ನಾಶಮಾಡಿದ್ದಾರೆ ಎಂದು ತೋರುತ್ತದೆ. ಹೀಗಾಗಿ ಲೆಕ್ಚರ್ ಬ್ಯೂರೋವಿನವರು ಆಯೋಜಿಸಿದ ಸ್ವಾಮೀಜಿಯವರ ಭಾಷಣಗಳ ಬಗ್ಗೆ ನಮಗೆ ಏನೂ ತಿಳಿದುಬಂದಿಲ್ಲ. ಇಷ್ಟಾದರೂ ಸ್ವಾಮೀಜಿಯವರ ಪ್ರವಚನ ಪ್ರವಾಸದ ಬಗ್ಗೆ ಬೇರೆ ಮೂಲಗಳಿಂದ ಮಾಹಿತಿಗಳು ನಮಗೆ ಅಲ್ಪಸ್ವಲ್ಪ ಲಭ್ಯವಾಗಿವೆ. ಅಲ್ಲದೆ, ಸ್ವಾಮೀಜಿ ಈ ಕಾಲಾವಧಿಯಲ್ಲಿ ಭಾರತದಲ್ಲಿರುವ ತಮ್ಮ ಸ್ನೇಹಿತರು ಮತ್ತು ಗುರುಭಾಯಿಗಳ ಜೊತೆಗೆ ಪತ್ರವ್ಯವಹಾರವನ್ನು ಕೂಡ ಇಟ್ಟುಕೊಂಡಿರಲಿಲ್ಲ. ಹೀಗಾಗಿ ಸ್ವಾಮೀಜಿಯವರು ಅಮೆರಿಕೆಯಲ್ಲಿ ಏನು ಮಾಡುತ್ತಿದ್ದಾರೆ ಎಂದು ತಿಳಿದುಕೊಳ್ಳಲು ಕಾತರರಾಗಿದ್ದ ಅವರ ಮಿತ್ರರು 'ಥಾಮಸ್ ಕುಕ್ ಎಂಡ್ ಸನ್, ಕಲ್ಕತಾ' ಕಂಪನಿಗೆ ಮಾರ್ಚ್ ೧೮, ೧೮೯೪ರಂದು ಒಂದು ಪತ್ರವನ್ನು ಬರೆಯುತ್ತಾರೆ. ಅದರಲ್ಲಿ ಸ್ವಾಮೀಜಿಯವರ ಪ್ರವಾಸ ಮತ್ತು ಪ್ರವಚನಗಳ ಬಗ್ಗೆ ಮಾಹಿತಿಯನ್ನು ಒದಗಿಸುವಂತೆ ಕೇಳಿಕೊಳ್ಳುತ್ತಾರೆ. ಈ ಪತ್ರವನ್ನು ಕಾಳೀಕೃಷ್ಣ ದತ್ತ ಎನ್ನುವವರು ಸಹಿ ಮಾಡಿದ್ದಾರೆ.

ಸ್ವಾಮೀಜಿಯವರು ಅಮೆರಿಕ ದೇಶಕ್ಕೆ ಬಂದು ಏಳು ತಿಂಗಳ ಕಾಲ ತಮ್ಮ ಸೋದರಸಂನ್ಯಾಸಿಗಳ ಜೊತೆಗೆ ಯಾವ ಪತ್ರ ವ್ಯವಹಾರವನ್ನೂ ಮಾಡಿರಲಿಲ್ಲ ಎಂದು ನಂಬಲಾಗಿತ್ತು. ಆದರೆ ಅವರು ತಮ್ಮ ಮೊದಲ ಪತ್ರವನ್ನು ರಾಮಕೃಷ್ಣಾನಂದರಿಗೆ ಬರೆದರು. ಸ್ವಾಮಿ ರಾಮಕೃಷ್ಣಾನಂದರು ಖೇತ್ರಿ ಮಹಾರಾಜರ ಆಪ್ತ ಕಾರ್ಯದರ್ಶಿಯಾಗಿದ್ದ ಮುನ್ಷಿ ಜಗಮೋಹನಲಾಲ್ ಅವರಿಗೆ ಫೆಬ್ರವರಿ ೧೮, ೧೮೯೪ರಂದು ಈ ಪತ್ರದ ಬಗ್ಗೆ ಮಾಹಿತಿ ನೀಡುತ್ತಾರೆ. ಹೀಗಾಗಿ ಸ್ವಾಮೀಜಿ ಈ ಪತ್ರವನ್ನು ಜನವರಿ ತಿಂಗಳಿನಲ್ಲಿಯೇ ಬರೆದಿರಬೇಕೆಂಬುದು ಸುಸ್ಪಷ್ಟ. ಏಕೆಂದರೆ ಆ ಕಾಲದಲ್ಲಿ ಟಪಾಲು ಅಮೆರಿಕೆಯಿಂದ ಭಾರತವನ್ನು ತಲುಪುವುದಕ್ಕೆ ಒಂದು ತಿಂಗಳು ತಗಲುತ್ತಿತ್ತು. ಸ್ವಾಮೀಜಿಯವರು ಇಷ್ಟು ದೀರ್ಘಕಾಲ ತಮ್ಮ ಸೋದರ ಸಂನ್ಯಾಸಿಗಳ ಜೊತೆಗೆ ಪತ್ರವ್ಯವಹಾರವನ್ನು ಮಾಡದೆ ಇರುವುದಕ್ಕೆ ಇನ್ನೊಂದು ಕಾರಣವೂ ಇತ್ತು. ಸ್ವಾಮಿ ಶಿವಾನಂದ, ಸ್ವಾಮಿ ಬ್ರಹ್ಮಾನಂದ, ಸ್ವಾಮಿ ತುರೀಯಾನಂದ ಮೊದಲಾದ ಅವರ ಸಂನ್ಯಾಸಿ ಸಹೋದರರು ಪರಿವ್ರಾಜಕ ಜೀವನವನ್ನು ನಡೆಸುತ್ತಿದ್ದರು; ಭಾರತದ ಉದ್ದಗಲದಲ್ಲಿ ಅಡ್ಡಾಡುತ್ತಿದ್ದರು. ಏಪ್ರಿಲ್ ೧೮೯೪ರಲ್ಲಿ ಸ್ವಾಮೀಜಿ ಸ್ವಾಮಿ ಶಿವಾನಂದರಿಗೆ ಒಂದು ಪತ್ರವನ್ನು ಬರೆದು, ಎಲ್ಲರೂ ಕೊಲ್ಕತೆಯ ಬಾರಾನಗರದ ಮಠಕ್ಕೆ ಹಿಂದಿರುಗಬೇಕು ಎಂದು ಮನವಿ ಮಾಡಿದರು. ಸ್ವಾಮಿ ಶಿವಾನಂದರು ಈ ಸಂದೇಶವನ್ನು ಲಕ್ನೋ ನಗರದಲ್ಲಿ ನೆಲೆಸಿದ್ದ ಸ್ವಾಮಿ ಬ್ರಹ್ಮಾನಂದರು ಮತ್ತು ಸ್ವಾಮಿ ತುರೀಯಾನಂದರಿಗೆ ತಲುಪಿಸಿದರು. ಕಾಲಕ್ರಮೇಣ, ಅವರೆಲ್ಲರೂ ಬಾರಾನಗರ ಮಠಕ್ಕೆ ಹಿಂದಿರುಗಿದರು. ಸ್ವಾಮೀಜಿ ೧೮೯೪ರ ಕಡೆಯ ಭಾಗ ಮತ್ತು ೧೮೯೫ರ ಮೊದಲ ಭಾಗದಲ್ಲಿ ತಮ್ಮ ಸೋದರ ಶಿಷ್ಯರಿಗೆ ಮತ್ತೆ ಮತ್ತೆ ಪತ್ರಗಳನ್ನು ಬರೆದಿರುವುದನ್ನು ಕಾಣುತ್ತೇವೆ. ಅವುಗಳಲ್ಲಿ ಅವರ ಕಾರ್ಯ ಚಟುವಟಿಕೆಗಳ ಬಗ್ಗೆ ಅಷ್ಟೇನೂ ಮಾಹಿತಿಯನ್ನು ನಾವು ಕಾಣುವುದಿಲ್ಲ. ಆದರೆ ಅವುಗಳಲ್ಲಿ ಅವರ ಪ್ರೇರಣಾದಾಯಕ ಶಕ್ತಿ ಮತ್ತು ಭಾರತೀಯ ಸಂನ್ಯಾಸಿ ಸಂಪ್ರದಾಯದಲ್ಲಿ ಕ್ರಾಂತಿಯನ್ನು ತರುವ ಅವರ ಇಚ್ಛಾಶಕ್ತಿ – ಇವುಗಳು ಎದ್ದು ಕಾಣುತ್ತಿದ್ದವು.

*(ಮುಂದುವರಿಯುವುದು)*